

ಎಡದಿಂದ ಬಲಕ್ಕೆ...
ಪಾರ್ಥಸಾರಥಿ ಎಸ್.ಎಸ್
ಸುಸ್ಮಿತಾ
ಸುಬ್ರತೋ ಬಾಗ್ಚಿ
ರಾಧಾ ಪಾರ್ಥಸಾರಥಿ

# ವಿಜ್ಞಾನ ದೇಗುಲದ ಆರಾಧಕರು

■ ಪ್ರವೀಣ ಕುಲಕರ್ಣಿ

ಈ ಲೇಖನದ ಜತೆಗಿರುವ ಚಿತ್ರವನ್ನೊಮ್ಮೆ ನೋಡಿ. ನಾವು ಯಾವುದೇ ಯಾತ್ರಾಸ್ಥಳಕ್ಕೆ ಹೋದಾಗ ಅಲ್ಲಿನ ದೇವಾಲಯದ ದ್ವಾರದಲ್ಲಿ ಫೋಟೊಕ್ಕೆ ಹೀಗೆಯೇ ಪೋಸು ಕೊಟ್ಟಿರುತ್ತೇವೆ ಬಿಡಿ, ಇದರಲ್ಲೇನು ವಿಶೇಷ ಎನ್ನದಿರಿ. ಹೌದು, ಈ ನಾಲ್ವರು ಕುಳಿತ ಸ್ಥಳವೂ ಒಂದು ರೀತಿಯಲ್ಲಿ ದೇವಾಲಯವೇ. ಆದರೆ, ಇದು ವಿಜ್ಞಾನ ದೇಗುಲ. ಆ ದೇಗುಲದ ಆವರಣದಲ್ಲಿ ಬಡರೋಗಿಗಳಿಗೆ ಚಿಕಿತ್ಸೆ ನೀಡುವಂತಹ 'ಗರ್ಭಗುಡಿ'ಯನ್ನೇ ಕಟ್ಟಲು ಬಂದವರು ಇವರು. ದೇಶದ ಉಳ್ಳವರ ಪಾಲಿಗೆಲ್ಲ ಆದರ್ಶವಾಗಿ ನಿಂತವರೂ ಹೌದು.

ಬೆಂಗಳೂರಿನ 'ಭಾರತೀಯ ವಿಜ್ಞಾನ ಸಂಸ್ಥೆ'ಯ (ಐಐಎಸ್ಸಿ) ಆವರಣದಲ್ಲಿ ಆಸ್ಪತ್ರೆಯೊಂದನ್ನು ಕಟ್ಟಲು ಅಗತ್ಯವಾದ ₹ 425 ಕೋಟಿಯನ್ನು ತಂದು ಸದ್ದಿಲ್ಲದೆ ಕೊಟ್ಟುಹೋದ ಆ ಜೋಡಿಗಳೇ ಸುಸ್ಮಿತಾ–ಸುಬ್ರತೋ ಬಾಗ್ಚಿ ಮತ್ತು ರಾಧಾ–ಪಾರ್ಥಸಾರಥಿ ಎಸ್.ಎನ್. ದಂಪತಿಗಳು. ಸುಬ್ರತೋ ಮತ್ತು ಪಾರ್ಥಸಾರಥಿ ಇಬ್ಬರೂ 'ಮೈಂಡ್ ಟ್ರೀ' ಸಂಸ್ಥೆಯ ಸಹಸ್ಥಾಪಕರು. 800 ಹಾಸಿಗೆಗಳ, ಲಾಭರಹಿತ, ಮಲ್ಟಿ–ಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣಕ್ಕಾಗಿ ಅವರು ಇಷ್ಟೊಂದು ದೊಡ್ಡ ಮೊತ್ತವನ್ನು ದೇಣಿಗೆ ನೀಡಿದ್ದಾರೆ. ಹೃದಯವೈಶಾಲ್ಯ ಮೆರೆದ ಈ ದಂಪತಿಗಳಿಗೆ ಈಗ ಸಮಾಜದ ಋಣ ಸಂದಾಯ ಮಾಡಿದ ಒಂದು ತೃಪ್ತಭಾವ.

ಶತಮಾನಕ್ಕೂ ಹೆಚ್ಚಿನ ಇತಿಹಾಸ ಹೊಂದಿರುವ ಐಐಎಸ್ಸಿಯಲ್ಲಿ ವಿಜ್ಞಾನ ಮತ್ತು ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಹಲವು ಸಂಶೋಧನೆಗಳು ನಡೆಯುತ್ತಿವೆ. ಉತ್ಕೃಷ್ಟ ಶಿಕ್ಷಣದ ಸೌಲಭ್ಯವನ್ನೂ ಈ ಸಂಸ್ಥೆ ಹೊಂದಿದೆ. ವಿಜ್ಞಾನ ಮತ್ತು ಎಂಜಿನಿಯರಿಂಗ್ ಜೊತೆ ವೈದ್ಯಕೀಯ ಕ್ಷೇತ್ರವನ್ನು ಬೆಸೆಯಲು ಪ್ರಾಂಗಣದಲ್ಲಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಸ್ಥಾಪಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಅದರ ಭಾಗವಾಗಿಯೇ ಈಗ 'ಬಾಗ್ಚಿಪಾರ್ಥಸಾರಥಿ ಆಸ್ಪತ್ರೆ' ತಲೆ ಎತ್ತುತ್ತಿದೆ.

ಬಾಗ್ಚಿಪಾರ್ಥಸಾರಥಿ ಆಸ್ಪತ್ರೆಯು ರೋಗನಿರ್ಣಯ, ಚಿಕಿತ್ಸೆ ಮತ್ತು ಸಂಶೋಧನೆಗೆ ಸುಧಾರಿತ ಸೌಲಭ್ಯಗಳನ್ನು ಹೊಂದಿರಲಿದೆ. ಕ್ಯಾನ್ಸರ್ ವಿಜ್ಞಾನ (ಆಂಕಾಲಜಿ), ಹೃದ್ರೋಗ ವಿಜ್ಞಾನ, ನರವಿಜ್ಞಾನ, ಅಂತಃಸ್ರಾವ ವಿಜ್ಞಾನ (ಎಂಡೊಕ್ರೈನಾಲಜಿ), ಉದರ ವಿಜ್ಞಾನ (ಗ್ಯಾಸ್ಟ್ರೊಎಂಟರಾಲಜಿ), ಮೂತ್ರಪಿಂಡ ವಿಜ್ಞಾನ (ನೆಫ್ರಾಲಜಿ ಮತ್ತು ಯುರಾಲಜಿ), ಚರ್ಮರೋಗ ವಿಜ್ಞಾನ ಮತ್ತು ಪ್ಲಾಸ್ಟಿಕ್ ಸರ್ಜರಿ, ಅಂಗಾಂಗ ಕಸಿ, ರೊಬೋಟಿಕ್ ಶಸ್ತ್ರಚಿಕಿತ್ಸೆ, ನೇತ್ರವಿಜ್ಞಾನ ಸೇರಿದಂತೆ ಹಲವಾರು ವಿಶೇಷ ವಿಭಾಗಗಳನ್ನು ಹೊಂದಿರಲಿದೆ. ಆಸ್ಪತ್ರೆಗೆ ಸಂಬಂಧಿಸಿದ ಈ ವಿವರಗಳ ಕುರಿತು ಮುಂದೆ ಯಾವತ್ತಾದರೂ ನೋಡೋಣ. ಆಸ್ಪತ್ರೆ ತಲೆ ಎತ್ತಲು ಕಾರಣವಾಗುತ್ತಿರುವ ಸೆಲೆಬ್ರಿಟಿಗಳ ವಿಷಯಕ್ಕೆ ಬರೋಣ.

ನಮ್ಮ ಇನ್ಫೊಸಿಸ್ ಸಂಸ್ಥೆಯಂತೆಯೇ 'ಮೈಂಡ್ ಟ್ರೀ' ಸಹ ಮಾಹಿತಿ ತಂತ್ರಜ್ಞಾನದ ಸೇವಾಕ್ಷೇತ್ರದಲ್ಲಿ ತೊಡಗಿಸಿಕೊಂಡಿರುವ ಉದ್ಯಮ. ಸುಬ್ರತೋ ಮತ್ತು ಪಾರ್ಥಸಾರಥಿ ಇಬ್ಬರೂ ಈ ಉದ್ಯಮದ ಸ್ಥಾಪನೆಗೆ ಅಡಿಗಲ್ಲು ಹಾಕಿದವರು. ಒಡಿಶಾದ ಸುಬ್ರತೋ ಅವರದು ಮೂಲತಃ ಕೆಳ ಮಧ್ಯಮವರ್ಗದ ಕುಟುಂಬ. ಅವರ ತಂದೆ ಗೋಪಾಲ್ ಬಾಗ್ಚಿ ಕೆಳದರ್ಜೆಯ ಸರ್ಕಾರಿ ಉದ್ಯೋಗಿ ಆಗಿದ್ದವರು. ತಂದೆಗೆ ವರ್ಗ ಆದಾಗಲೆಲ್ಲ ಸುಬ್ರತೋ ಅವರ 'ಟೂರಿಂಗ್ ಹೋಂ' ಒಂದೂರಿನಿಂದ ಮತ್ತೊಂದಕ್ಕೆ ಪ್ರಯಾಣ ಬೆಳೆಸುತ್ತಿತ್ತು. ಒಡಿಶಾದ ಹಲವು ಭಾಗಗಳಲ್ಲಿ ಬಾಲ್ಯ ಕಳೆದ ಸುಬ್ರತೋ ಅವರಿಗೆ ಸಮಾಜದ ಮೇಲೆ ಪ್ರೀತಿ ಬೆಳೆಯಲು ಈ ಓಡಾಟವೂ ಕಾರಣವಾಯಿತಂತೆ. ತಮ್ಮ ಜೀವನ ಚರಿತ್ರೆ 'ಗೋ ಕಿಸ್ ದಿ ವರ್ಲ್ಡ್'ನಲ್ಲಿ ಈ ಕುರಿತು ಹಲವು ವಿವರಗಳನ್ನು ಅವರು ನೀಡಿದ್ದಾರೆ.

ಕಾಲೇಜು ದಿನಗಳಲ್ಲಿ ಎನ್‌ಸಿಸಿ ಸೇರಿ, ಪ್ರಧಾನಮಂತ್ರಿ ಅವರಿಂದ 'ಅತ್ಯುತ್ತಮ ಕೆಡೆಟ್' ಪ್ರಶಸ್ತಿಯನ್ನೂ ಅವರು ಪಡೆದಿದ್ದರು. ಒಡಿಶಾ ಸರ್ಕಾರದಲ್ಲಿ ಕ್ಲರ್ಕ್ ಆಗಿ ಸೇವೆ ಆರಂಭಿಸಿದ್ದ ಅವರು, ಮುಂದೆ ಕಂಪ್ಯೂಟರ್ ವಿಜ್ಞಾನದಲ್ಲಿ ಅಧ್ಯಯನ ನಡೆಸಿದರು. ಮುಂದೆ ವಿಪ್ರೊ ಸಂಸ್ಥೆಯ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯ ಕಾರ್ಯನಿರ್ವಾಹಕನ ಹುದ್ದೆ ಕೈಬೀಸಿ ಕರೆಯಿತು. ಅಲ್ಲಿಂದ 'ಮೈಂಡ್‌ಟ್ರೀ'ಗೆ ವೃತ್ತಿ ಬದುಕಿನ ಸೀಮೋಲ್ಲಂಘನವಾಯಿತು. ಲೇಖಕರೂ ಆಗಿರುವ ಅವರು ಹಲವು ಕೃತಿಗಳನ್ನು ಕೊಟ್ಟಿದ್ದಾರೆ. ಅವರ ಪತ್ನಿ ಸುಸ್ಮಿತಾ ಸಹ ಹೆಸರಾಂತ ಲೇಖಕಿ. ಒಡಿಯಾ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅವರ ಕೃತಿಗಳು ತುಂಬಾ ಜನಪ್ರಿಯ. ಸಾಹಿತ್ಯ ಅಕಾಡೆಮಿ ಗೌರವವೂ ಅವರಿಗೆ ಸಂದಿದೆ.

ಭಾರತೀಯ ಐಟಿ ವಲಯದಲ್ಲಿ ಮೂರೂವರೆ ದಶಕಗಳ ಸುದೀರ್ಘ ಅನುಭವ ಹೊಂದಿದವರು ಪಾರ್ಥಸಾರಥಿ. ಸದ್ಯ 'ಮೈಂಡ್‌ಟ್ರೀ'ಯ ಮುಖ್ಯ ಕಾರ್ಯಾಚರಣೆ ಅಧಿಕಾರಿ (ಸಿಒಒ). ಮೈಂಡ್‌ಟ್ರೀ ಸ್ಥಾಪನೆಯ ಮುನ್ನ ಇವರೂ ವಿಪ್ರೊ ಸಂಸ್ಥೆಯಲ್ಲೇ ಇದ್ದವರು. ಆಗಿನಿಂದಲೂ ಸುಬ್ರತೋ ಮತ್ತು ಪಾರ್ಥಸಾರಥಿ ಇಬ್ಬರೂ ಪರಮಾಪ್ತ ಗೆಳೆಯರು. ಬೆಂಗಳೂರಿನ ವಾಸ ಅವರಿಗೆ ಐಐಎಸ್ಸಿಯ ಮಹತ್ವವನ್ನು ಮತ್ತಷ್ಟು ಅರ್ಥ ಮಾಡಿಸಿದಂತಿದೆ. ಹೀಗಾಗಿ ಈ ಜೋಡಿ ದೊಡ್ಡ ಸಮಾಜ ಸೇವೆಗೆ ಕೈಹಾಕಿದೆ. ಇಬ್ಬರ ಪತ್ನಿಯರೂ ಇಷ್ಟೊಂದು ದೊಡ್ಡ ಮೊತ್ತದ ದೇಣಿಗೆಗೆ ಖುಷಿಯಿಂದಲೇ ಒಪ್ಪುವ ಮೂಲಕ ಇಂತಹದ್ದೊಂದು ಸೇವಾಕೈಂಕರ್ಯ ಸಾಧ್ಯವಾಗಲು ಕಾರಣರಾಗಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65